# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 18 |
| **ಸದಸ್ಯರ ಹೆಸರು** | : | ಶ್ರೀ ಐವನ್ ಡಿಸೋಜಾ<br>(ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 05.03.2025 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ಬಂದರುಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗಳು ಸರ್ಕಾರದ ಮುಂದಿದೆ. | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಳೇ ಮಂಗಳೂರು ಬಂದರನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದ್ದು ಈ ನಿಟ್ಟಿನಲ್ಲಿ ಕೇಂದ್ರ ಪುರಸ್ಕೃತ ಸಾಗರಮಾಲ ಯೋಜನೆಯಡಿ ಈ ಕೆಳಗಿನ ಯೋಜನೆಗಳನ್ನು ಕೈಗೊಳ್ಳಲಾಗುತ್ತಿವೆ.<br><br>1) ₹65.00 ಕೋಟಿ ವೆಚ್ಚದಲ್ಲಿ ಮಂಗಳೂರು ಹಳೇ ಬಂದರಿನಲ್ಲಿ ಕೋಸ್ಟಲ್ ಬರ್ತ್ ನಿರ್ಮಾಣ ಕಾಮಗಾರಿ.<br><br>2) ₹75.75 ಕೋಟಿ ವೆಚ್ಚದಲ್ಲಿ ಹಳೇ ಮಂಗಳೂರು ಬಂದರಿನಲ್ಲಿ ಲಕ್ಷದ್ವೀಪ ಕೇಂದ್ರಾಡಳಿತ ಪ್ರದೇಶಕ್ಕೆ ಮೀಸಲಿಟ್ಟ ಜೆಟ್ಟಿ ಮತ್ತು ಇತರೆ ಸಂಬಂಧಿತ ಮೂಲಸೌಕರ್ಯ ಸೌಲಭ್ಯಗಳನ್ನು ಸ್ಥಾಪಿಸುವುದರೊಂದಿಗೆ Cargo & Cruise Terminal ನ್ನು ಅಭಿವೃದ್ಧಿಪಡಿಸುವ ಕಾಮಗಾರಿ.<br><br>3)₹35.50 ಕೋಟಿ ಮೊತ್ತದಲ್ಲಿ ಮಂಗಳೂರು ಬಂದರಿನ ಆಳವನ್ನು 7 ಮೀ. ವರೆಗೆ ಹೆಚ್ಚಿಸಲು ಕ್ಯಾಪಿಟಲ್ ಡ್ರೆಡ್ಜಿಂಗ್ ಕಾಮಗಾರಿ . |
| ಆ) | ಮಂಗಳೂರು ನಗರದಲ್ಲಿ ಬಂದರು ಪ್ರದೇಶವನ್ನು ಮೀನುಗಾರಿಕೆ ಬಂದರು ಅಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸದೇ ಇರುವುದರಿಂದ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಇಲಾಖೆ ಮುಂದಿರುವ ಯೋಜನೆಗಳಾವುವು. | ಮಂಗಳೂರು ಮೀನುಗಾರಿಕಾ ಬಂದರನ್ನು ಮೀನುಗಾರಿಕೆ ಇಲಾಖೆಯ ವತಿಯಿಂದಲೇ ಅಭಿವೃದ್ಧಿ ಪಡಿಸಲು ಕ್ರಮ ವಹಿಸಲಾಗುತ್ತಿದ್ದು, ಈ ಸಂಬಂಧ ಬಂದರಿನ 3ನೇ ಹಂತದ ಉಳಿಕೆ ಕಾಮಗಾರಿಗೆ ₹49.50 ಕೋಟಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ.<br><br>ಮೀನುಗಾರಿಕಾ ಬಂದರನ್ನು ಉನ್ನತೀಕರಣ ಮತ್ತು ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ₹37.47 ಕೋಟಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ. |

| | | |
|---|---|---|
| ಇ) | ಬಂದರು ಸ್ಥಳದಲ್ಲಿ ವಾಸವಾಗಿರುವ ಸ್ಥಳೀಯ ಕುಟುಂಬಗಳಿಗೆ ಹೆಚ್ಚುವರಿ ನೆಲಬಾಡಿಗೆ ವಿಧಿಸುತ್ತಿದ್ದು ನೂರಾರು ವರ್ಷಗಳಿಂದ ಈ ಪ್ರದೇಶದಲ್ಲಿ ವಾಸವಾಗಿರುವವರಿಗೆ ಸ್ಥಳವನ್ನು ಮಂಜೂರು ಮಾಡಲು ಇಲಾಖೆ ಕೈಗೊಂಡಿರುವ ಕ್ರಮವೇನು? ( ವಿವರ ನೀಡುವುದು) | ಕರ್ನಾಟಕ ಪೋರ್ಟ್ (ಲ್ಯಾಂಡಿಂಗ್ & ಶಿಪ್ಪಿಂಗ್ ಫೀಸ್) (ಅಮೆಂಡ್‌ಮೆಂಟ್) ರೂಲ್ಸ್-2022ರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ IDD 141 PSP 2021 ದಿನಾಂಕ: 0.06.2022ರಲ್ಲಿ ಜಾರಿಗೊಳಿಸಿದ್ದು, ಸದರಿ ನಿಯಮದ ಶೆಡ್ಯೂಲ್-ಎಫ್ ಕ್ರಮ ಸಂಖ್ಯೆ (5) ರಲ್ಲಿ ವಾಸಸ್ಥಾನದ ಉದ್ದೇಶಕ್ಕೆ ನಿಗದಿಪಡಿಸಿದ ದರಗಳಂತೆ ಶುಲ್ಕಗಳನ್ನು ಆಕರಿಸಲಾಗುತ್ತಿದೆ. ಬೇರೆ ಯಾವುದೇ ಹೆಚ್ಚುವರಿ ಶುಲ್ಕವನ್ನು ಆಕರಿಸುತ್ತಿಲ್ಲ. ಮೇಲಿನ ನಿಯಮದಡಿ ತಾತ್ಕಾಲಿಕ ನೆಲೆಯಲ್ಲಿ ವಾಸಸ್ಥಳವನ್ನು ಮಂಜೂರು ಮಾಡಲಾಗಿದೆ. |

**IDD 17 PSP 2025**

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**